Ref.No.66/2022

MW-1,

**<u>ದಿನಾಂಕಃ 25.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀಮತಿ.LCH ವಕೀಲರಿಂದ</u>**

ನಾನು 2 ನೇ ಪಾರ್ಟಿಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಯಾಗಿರುವುದಿಲ್ಲ ಎಂದರೆ ಸರಿ. ನಾನು ವಿಚಾರಣೆಯನ್ನು ಸಿ ಅಂಡ್ ಡಿ ರೆಗ್ಯೂಲೇಷನ್ಸ್ ಪ್ರಕಾರ ಮಾಡಿರುತ್ತೇನೆ. ಆಡಳಿತ ಪರ ಸಾಕ್ಷಿದಾರರರಿಂದ 6 ದಾಖಲಾತಿಗಳನ್ನು ಗುರುತಿಸಿರುತ್ತೇನೆ ಎಂದರೆ ಸರಿ. ಸದರಿ ದಾಖಲಾತಿಗಳಲ್ಲಿ ನಿಎಂ-3 ಮತ್ತು 6 ಸಿಡಿಗಳಾಗಿರುತ್ತವೆ ಎಂದರೆ ಸರಿ. ಸದರಿ ಸಿಡಿಗಳು 1 ನೇ ಪಾರ್ಟಿ ಮತ್ತು ವರದಿಗಾರರ ನಡುವೆ ನಡೆದಂತಹ ವಾಗ್ವಾದದ ಸಿಡಿಗಳಾಗಿರುತ್ತವೆ. ನಿಎಂ-3 ಮತ್ತು 6 ಸಿಡಿಗಳನ್ನು ನೀಡುವ ಕಾಲಕ್ಕೆ ಮಂಡನಾದಿಕಾರಿಗಳು ಅದರೊಂದಿಗೆ ಸೆಕ್ಷನ್ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ, ಸಾಕ್ಷಿದಾರರು ಮುಂದುವರೆದು ನಾನು ವಿಚಾರಣಾ ಕಾಲಕ್ಕೆ 1 ನೇ ಪಾರ್ಟಿಯ ಸಮಕ್ಷಮ ಅದನ್ನು ವೀಕ್ಷಿಸಿರುತ್ತೇನೆ. ನಿಎಂ-3 ನ್ನು ನಾನು ದಿಃ05.11.2019 ರಂದು ಗುರುತಿಸುವಿಕೆಗೆ ಒಳಪಡಿಸಿರುತ್ತೇನೆ. ನಿಎಂ-6 ನ್ನು ನಾನು ದಿಃ11.11.2019 ರಂದು ಗುರುತಿಸುವಿಕೆಗೆ ಒಳಪಡಿಸಿರುತ್ತೇನೆ. ದಿಃ05.11.2019 ರ ವಿಚಾರಣಾ ನಡವಳಿಯಲ್ಲಿ ನಿಎಂ-3 ನ್ನು ವೀಕ್ಷಿಸಿದ ಬಗ್ಗೆ ನಾನು ನಮೂದಿಸಿರುತ್ತೇನೆ. ದಿಃ11.11.2019 ರ ವಿಚಾರಣಾ ನಡವಳಿಯಲ್ಲಿ ನಿಎಂ-6 ನ್ನು ವೀಕ್ಷಿಸಿದ ಬಗ್ಗೆ ನಾನು ನಮೂದಿಸಿರುವುದಿಲ್ಲ, ಆದರೆ ಸದರಿ ಸಿಡಿಯ ಪ್ರತಿಯನ್ನು 1 ನೇ ಪಾರ್ಟಿಯವರಿಗೆ ನೀಡಿದ್ದೇನೆ ಎಂದು ನಮೂದಿಸಿದ್ದೇನೆ. ನಿಎಂ-3 ಮತ್ತು 6 ಸಿಡಿಗಳನ್ನು ಆಡಳಿತದವರಿಗೆ ಸಹಾಯ ಮಾಡುವ ಉದ್ದೇಶದಿಂದ, ಕಾನೂನುಬದ್ಧವಾಗಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಆಂತರಿಕ ವಿಚಾರಣೆ ಕಾಲಕ್ಕೆ ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಎಂ-3 ಮತ್ತು 6 ಸಿಡಿಗಳ ಪ್ರತಿಯನ್ನು ನಾನು 1 ನೇ ಪಕ್ಷಕಾರರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ವಕೀಲರು ಪ್ರತಿನಿಧಿಯವರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ನಿಎಂ-9 1 ನೇ ಪಾರ್ಟಿಯವರು ನೀಡಿದ ಸಂರಕ್ಷಣಾ ಹೇಳಿಕೆಯಾಗಿರುತ್ತದೆ ಎಂದರೆ ಸರಿ.

ಸದರಿ ಹೇಳಿಕೆಯಲ್ಲಿ 1 ನೇ ಪಾರ್ಟಿಯವರು ಅದರೊಂದಿಗೆ 4 ದಾಖಲಾತಿಗಳನ್ನು ಲಗತ್ತಿಸಿ ನೀಡಿರುತ್ತಾರೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ನಾನು 1 ನೇ ಪಾರ್ಟಿಯವರ ನಿಶಾನೆ ಎಂದು ಗುರುತಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಅದನ್ನು ಸಂರಕ್ಷಣಾ ಹೇಳಿಕೆಯ ಜೊತೆ ನೀಡಿದ್ದು, ಅದನ್ನು 1 ನೇ ಪಕ್ಷಕಾರರು ತಮ್ಮ ಸಾಕ್ಷ್ಯ ವಿಚಾರಣೆ ಕಾಲಕ್ಕೆ ನೀಡದೇ ಇದುದ್ದರಿಂದ ಗುರುತಿಸುವಿಕೆಗೆ ಒಳಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪಕ್ಷಕಾರರಿಗೆ ತಮ್ಮ ಸಾಕ್ಷ್ಯವನ್ನು ನೀಡಲು ಅವಕಾಶ ನೀಡಿರುತ್ತೇನೆ. ನಾನು ಹೇಳಿದಂತೆ 1 ನೇ ಪಕ್ಷಕಾರರಿಗೆ ತಮ್ಮ ಸಾಕ್ಷ್ಯವನ್ನು ನೀಡಲು ಅವಕಾಶ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲರನ್ನೂ ಕರೆಸಿ, ವಿಚಾರಣೆಯನ್ನು ನಾನು ದಿಃ18.12.2019 ರಂದು ಮುಕ್ತಾಯಗೊಳಿಸಿರುತ್ತೇನೆ. ದಿಃ26.12.2019 ರಂದು ಮಂಡನಾಧಿಕಾರಿಗಳು ತಮ್ಮ ಲಿಖಿತವಾದವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ನನ್ನ ವಿಚಾರಣಾ ವರದಿ ಮತ್ತು ನಿರ್ಣಯವನ್ನು ನೀಡುವ ಕಾಲಕ್ಕೆ ಮಂಡನಾಧಿಕಾರಿಗಳ ಲಿಖಿತವಾದವನ್ನು ಪರಿಗಣಿಸಿರುತ್ತೇನೆ. ಸದರಿ ಲಿಖಿತವಾದದ ಪ್ರತಿಯನ್ನು 1 ನೇ ಪಕ್ಷಕಾರರಿಗೆ ನೀವು ನೀಡಿರುತ್ತಿರಾ ಎಂಬ ಸೂಚನೆಗೆ, ಸಾಕ್ಷಿದಾರರ ಕಛೇರಿಯಲ್ಲಿ ಅದನ್ನು ಸಲ್ಲಿಸಿದ್ದರಿಂದ, ಕಛೇರಿಯವರು ಅದನ್ನು 1 ನೇ ಪಕ್ಷಕಾರರಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಎಂ-10 ರಲ್ಲಿ 1 ನೇ ಪಕ್ಷಕಾರರು ಲಿಖಿತವಾದವನ್ನು ಪಡೆದುಕೊಂಡಿರುತ್ತಾರೆ ಎಂದು ತೋರಿಸಲು ಅದರಲ್ಲಿ ಅವರ ಷರಾ ಇರುವುದಿಲ್ಲ ಎಂದರೆ ಸರಿ. ನಾನು ವಿಚಾರಣಾ ನಡವಳಿಗಳನ್ನು ಕೆ.ಎಸ್.ಆರ್.ಟಿ.ಸಿ ಕಛೇರಿಯಲ್ಲಿ ನಡೆಸುತ್ತಿದ್ದೆನು. ವಿಚಾರಣಾ ಕಡತವನ್ನು ವಿಚಾರಣಾ ಕಾಲಕ್ಕೆ ಆಯಾ ದಿನಗಳಂದು ಪಡೆದು ಅದನ್ನು ವಾಪಸ್ಸು 2 ನೇ ಪಕ್ಷಕಾರರಿಗೆ ನೀಡುತ್ತಿದ್ದೆ, ವಿಚಾರಣೆ ಮುಗಿದ ನಂತರ ದಿಃ26.12.2019 ರಂದು 2 ನೇ ಪಕ್ಷಕಾರರಿಂದ ಸಂಪೂರ್ಣ ವಿಚಾರಣಾ ಕಡತವನ್ನು ನನ್ನ ಸುಪರ್ದಿಗೆ ಪಡೆದುಕೊಂಡಿರುತ್ತೇನೆ. ದಿಃ26.12.2019 ರಂದು ನಾನು ವಿಚಾರಣೆ ನಡವಳಿಯನ್ನು ಮಾಡಿರುವುದಿಲ್ಲ. ಮಂಡನಾಧಿಕಾರಿಗಳ ಲಿಖಿತವಾದವನ್ನು ನೀವು 1 ನೇ ಪಕ್ಷಕಾರರ ಅನುಪಸ್ಥಿತಿಯಲ್ಲಿ

ಪಡೆದುಕೊಂಡಿರುತ್ತೀರಾ ಎಂಬ ಸೂಚನೆಗೆ, ಸಾಕ್ಷಿದಾರರು ಕಡತದೊಂದಿಗೆ ಕಛೇರಿಯಲ್ಲಿ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಕಾಲಕ್ಕೆ ಸದರಿ ಲಿಖಿತವಾದವನ್ನು 1 ನೇ ಪಕ್ಷಕಾರರಿಗೆ ಪೂರೈಸುವ ಪ್ರಯತ್ನ ಮಾಡಿರುತ್ತೀರಾ ಎಂಬ ಸೂಚನೆಗೆ, ಸಾಕ್ಷಿದಾರರು ಕಛೇರಿಯಲ್ಲಿ ವಿಚಾರಿಸಿರುತ್ತೇನೆ, ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ, ಅದರ ಉಲ್ಲೇಖವನ್ನು ನಿಎಂ-6 ರಲ್ಲಿ ಮಾಡಿರುವುದಿಲ್ಲ ಎಂದರೆ ಸರಿ. ಮಂಡನಾಧಿಕಾರಿಗಳ ಲಿಖಿತವಾದದ ಪ್ರತಿಯನ್ನು ನಾನು 1 ನೇ ಪಕ್ಷಕಾರರಿಗೆ ಪೂರೈಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಡಳಿತದವರಿಗೆ ಸಹಾಯ ಮಾಡುವ ಉದ್ದೇಶದಿಂದ ಹಾಗೂ ಏಕಪಕ್ಷೀಯವಾಗಿ ವಿಚಾರಣೆ ನಡೆಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪಕ್ಷಕಾರರಿಗೆ ಅವರ ರಕ್ಷಣೆಯನ್ನು ಮಾಡಲು ಎಲ್ಲಾ ಅವಕಾಶಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರಣೆಯನ್ನು ಪ್ರಾಕೃತಿಕ ನ್ಯಾಯತತ್ವಕ್ಕೆ ಹಾಗೂ ಸಿ ಅಂಡ್ ಡಿ ರೆಗ್ಯೂಲೇಷನ್ಸ್ ವಿರುದ್ಧವಾಗಿ ನಡೆಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.